**O.S.No.97/2023**
**P.W-1**

**ಸಾಕ್ಷಿಯನ್ನು ದಿನಾಂಕ:03.12.2025ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ. ಎಂ ಎ ಸಿ ವಕೀಲರಿಂದ:**

ನನ್ನ ಸೋದರತ್ತೆ ನಿಡಸಾಲೆಯಲ್ಲಿ ಈಗಲೂ ವಾಸವಿದ್ದಾರೆ ಎಂದರೆ ಸರಿ. ನನ್ನ ಮತ್ತೊಬ್ಬ ಸೋದರತ್ತೆ ವೆಂಕಟಮ್ಮ ಮರಣ ಹೊಂದಿದ್ದು ಅವರಿಗೆ ಮಕ್ಕಳಿದ್ದಾರೆ ಎಂದರೆ ಸರಿ. ನನ್ನ ತಾತ ಗಿರಿತಿಮ್ಮೇಗೌಡರಿಗೆ ಮೂರು ಜನ ಗಂಡು ಮಕ್ಕಳು ಮತ್ತು ಮೂರು ಜನ ಹೆಣ್ಣು ಮಕ್ಕಳು. ನಮ್ಮ ಕುಟುಂಬದ ವಂಶವೃಕ್ಷವನ್ನು ಹಾಜರುಪಡಿಸಿಲ್ಲ. ನಮ್ಮ ತಂದೆ ಮತ್ತು ಅವರ ಸಹೋದರರ ನಡುವೆ 1970 ರಲ್ಲಿ ಆಗಿರುತ್ತದೆ. ಸದರಿ ವಿಭಾಗವು 2018 ರಲ್ಲಿ ನಮ್ಮ ಮತ್ತು ನಮ್ಮ ಚಿಕ್ಕಪ್ಪನ ಹೆಂಡತಿಯರ ನಡುವೆ ವಿಭಾಗ ಆಗಿತ್ತು. 2018 ಮತ್ತು 1970 ರಲ್ಲಿ ಆಗಿದ ವಿಭಾಗದಲ್ಲಿ ನನ್ನ ಸೋದರತ್ತೆಯರನ್ನು ಸೇರಿಸಿರಲಿಲ್ಲ. ನನ್ನ ಸೋದರತ್ತೆ ಆಗಲೀ ಅವರ ಮಕ್ಕಳನ್ನಾಗಲೀ ಈ ದಾವೇಯಲ್ಲಿ ಸೇರಿಸಿಲ್ಲ. ನನ್ನ ತಂದೆ 2010 ರಲ್ಲಿ ಮರಣ ಹೊಂದಿರುತ್ತಾರೆ. 1 ಮತ್ತು 2ನೇ ಪ್ರತಿವಾದಿಗಳು ಅವಿದ್ಯಾವಂತರು ಎಂದರೆ ಸರಿಯಲ್ಲ. 1 ಮತ್ತು 2ನೇ ಪ್ರತಿವಾದಿಗಳು ವ್ಯವಸಾಯ ಮಾಡುತ್ತಾರೆ ಎಂದರೆ ಸಾಕ್ಷಿಯು ಅವರು ಮಾಡುತ್ತಾರೆ ಮತ್ತು ನಾನು ಮಾಡುತ್ತೇನೆ ಎಂದು ನುಡಿಯುತ್ತಾರೆ.

2. ನಾನು ನಿವೃತ್ತ ಸರ್ಕಾರಿ ನೌಕರ ಎಂದರೆ ಸರಿ. 3ನೇ ಪ್ರತಿವಾದಿ ಸಣ್ಣ ಪುಟ್ಟ ವ್ಯವಹಾರ ಮಾಡುತ್ತಾರೆ. ನಾನು ಮತ್ತು 3ನೇ ಪ್ರತಿವಾದಿ 1970 ರ ನಂತರ ನಮ್ಮ ಕುಟುಂಬದ ಆದಾಯ ಮತ್ತು ಖರ್ಚುಗಳನ್ನು ನೋಡಿಕೊಳ್ಳುತ್ತಿದ್ದೆವು ಎಂದರೆ ಸಾಕ್ಷಿಯು ತಾವು ಕುಟುಂಬಕ್ಕೆ ಕೇವಲ ಹಣ ಹಾಡಿದ್ದು, ತಾನು ಯಾವುದೇ ಆದಾಯ ಪಡೆದಿಲ್ಲ ಎಂದು ನುಡಿಯುತ್ತಾರೆ. ನಾನು ಮತ್ತು 3ನೇ ಪ್ರತಿವಾದಿ ಮನೆಯ ಯಜಮಾನಿಕೆಯನ್ನು ನೋಡಿಕೊಳ್ಳುತ್ತಿದ್ದೆವು ಎಂದರೆ ಸರಿಯಲ್ಲ. ಒಟ್ಟು ಕುಟುಂಬದಿಂದ ಬಂದ ಉತ್ಪನ್ನದಿಂದ 3ನೇ ಪ್ರತಿವಾದಿಯ ಹೆಸರಿನಲ್ಲಿ ಪ್ರತಿವಾದಿ ಪತ್ರದ ಆಸ್ತಿಯನ್ನು

ಸರ್ವೆ ನಂ.29/2ಎ,30/2ಬಿ, 552/8,552/7 ಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅವರ ಸ್ವಂತ ಆದಾಯದಿಂದ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

3. ಬೆಂಗಳೂರಿನ ರಾಮಯ್ಯ ಸಿಟಿಯಲ್ಲಿ ನನ್ನ ಹೆಸರಿನಲ್ಲಿ ಮನೆ ಇದೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿಯ ಹೆಸರಿನಲ್ಲಿ ಜೆ ಪಿ ನಗರ ಮತ್ತು ಹನುಮಂತನಗರದಲ್ಲಿ ಮನೆ ಇದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. 3ನೇ ಪ್ರತಿವಾದಿಯ ಆಸ್ತಿಯು ತನ್ನ ಸ್ವಂತ ಆಸ್ತಿಯಾದ ಕಾರಣ, ಈ ದಾವೇಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನಾವು ಸಹೋದರರು ವಿಭಾಗ ಆಗಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.**

*( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.